
# ಬೆಳಕಿನ ಸಂಚಲನ

ಸಂಪುಟ 5, ಸಂಚಿಕೆ 4 ದ್ವೈಮಾಸಿಕ ವಾರ್ತಾಪತ್ರ ಜುಲೈ–ಆಗಸ್ಟ್ 2017



**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಏಪ್ರಿಲ್ 24, 2011ರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

“ಬೆಳಕು ಏಕೆ ವಿಫಲವಾಯಿತು?” ಎಂದು ಪತ್ರದ ಮೂಲಕ ನನ್ನನ್ನು ಒಬ್ಬರು ಕೇಳಿದರು. ಅವರ ಸ್ನೇಹಿತನಿಗೆ ಅವರು ಬೆಳಕನ್ನು ಕಳುಹಿಸುತ್ತಿದ್ದರು ಹಾಗೂ ಅವರ ಸ್ನೇಹಿತನಲ್ಲಿ ಒಂದು ರೀತಿಯ ಬದಲಾವಣೆಯನ್ನು ನಿರೀಕ್ಷಿಸುತ್ತಿದ್ದರು. ಆದರೆ ಅದು ಆಗಲಿಲ್ಲ.

ಬೆಳಕು ಎಂದಿಗೂ ವಿಫಲವಾಗುವುದಿಲ್ಲ. ವಿಫಲರಾಗಿರುವುದು ಅವರ ಸ್ನೇಹಿತ, ಬೆಳಕಲ್ಲ. ಬೆಳಕು ಬಲವಂತವಾಗಿ ಬದಲಾವಣೆಯನ್ನು ತರುವುದಿಲ್ಲ. ನಮ್ಮನ್ನು ಬದಲಾಯಿಸಿಕೊಳ್ಳಬೇಕೆನ್ನುವುದನ್ನು ನಾವೇ ಆಯ್ಕೆಮಾಡಿಕೊಳ್ಳಬೇಕು. ಬೆಳಕು ಎಲ್ಲಾ ರೀತಿಯ ಸಹಾಯ ಮತ್ತು ಎಲ್ಲಾ ರೀತಿಯ ಅವಕಾಶಗಳನ್ನು ನೀಡುತ್ತದೆ ಆದರೆ ಆಯ್ಕೆಯನ್ನು ನಾವೇ ಮಾಡಬೇಕು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ತನ್ನ ಕೋಪ ಕಡಿಮೆಯಾಗಲು ಲೈಟ್ ಚಾನಲಿಂಗ್ ಸಹಾಯ ಮಾಡಿದೆ ಎಂದು ಒಂದು ಶಾಲೆಯ ಸಣ್ಣ ಹುಡುಗನೊಬ್ಬ ತನ್ನ ತರಗತಿಯಲ್ಲಿ ಹೇಳಿದ ಹಾಗೂ ಅಲ್ಲಿದ್ದ ಅವನ ಸಹಪಾಠಿಗಳು ನಿಜವಾಗಿಯೂ ಅವನ ಕೋಪ ಕಡಿಮೆಯಾಗಿರುವುದನ್ನು ಅನುಮೋದಿಸಿದರು. ಹೈಸ್ಕೂಲ್‌ವೊಂದರ ಹುಡುಗಿಯೊಬ್ಬಳು ಒತ್ತಡವನ್ನು ನಿಭಾಯಿಸಲು ಲೈಟ್ ಚಾನಲಿಂಗ್‌ಅನ್ನು ಪ್ರಯತ್ನಿಸಿದಳು ಹಾಗೂ ಅವಳ ಸ್ನೇಹಿತರಿಗೂ ಕೂಡ ಅದರ ಅಭ್ಯಾಸ ಮಾಡುವಂತೆ ಉತ್ತೇಜಿಸುತ್ತಾಳೆ. ಅವಳು ಪ್ರಯೋಜನಗಳನ್ನು ತಾನೇ ಅನುಭವಿಸಿದ ಕಾರಣ ಲೈಟ್ ಚಾನಲಿಂಗ್‌ನಲ್ಲಿ ದೃಢನಂಬಿಕೆಯಿಟ್ಟು ಮಾತನಾಡುತ್ತಾಳೆ. ಶಿಕ್ಷಕಿಯೊಬ್ಬರು, ಹತಾಶರಾದ ಜನರನ್ನು ಭೇಟಿ ಮಾಡಿದಾಗಲೆಲ್ಲಾ, ಬೆಳಕನ್ನು ಚಾನಲ್ ಮಾಡಲು ಅವರಿಗೆ ಹೇಳುತ್ತಾರೆ.

ಹಾಗೂ ಸ್ವಯಂ ಅನುಭವಗಳಿಂದ ಪ್ರೇರಿತರಾದ ಅನೇಕ ಗೊತ್ತಿಲ್ಲದ ಬೆಳಕಿನ ಚಾನಲ್‌ಗಳು ಸದ್ದಿಲ್ಲದೆ ಈ ಸಂಚಲನವನ್ನು ಹರಡುತ್ತಿದ್ದಾರೆ.

ಅಂತಹ ಜನರ ಸದ್ದಿಲ್ಲದ, ಬೇಷರತ್ತಾದ ಬೆಂಬಲದಿಂದ ಲೈಟ್ ಚಾನಲ್ಸ್ ವಿಶ್ವ ಸಂಚಲನವು ಹರಡುತ್ತದೆ ಹಾಗೂ ಬಲಗೊಳ್ಳುತ್ತದೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಶಾಲಾ ರಜೆ ಮುಗಿದ ಮೇಲೆ ಲೈಟ್ ಚಾನಲಿಂಗ್ ಕಾರ್ಯ, ನಂಬಲಾಗದ ರೀತಿಯಲ್ಲಿ ಪ್ರಾರಂಭವಾಗಿರುವುದನ್ನು ತಿಳಿದು ಅಚ್ಚರಿಯಾಗುತ್ತದೆ. ಶಾಲೆಗಳು ತೆರೆಯುವುದನ್ನೇ ನಮ್ಮ ಕಾರ್ಯಕರ್ತರು ಕಾಯುತ್ತಿದ್ದರು; ಈ ಕೆಲಸದಿಂದ ಬಹಳ ಕಾಲ ದೂರವುಳಿಯುವುದು ಅವರಿಗೆ ಸಾಧ್ಯವಿಲ್ಲ. ತಮ್ಮ ಶಾಲೆಗಳಲ್ಲಿ ಚಾನಲಿಂಗ್ ಅನ್ನು ಪುನರಾರಂಭಿಸಲು ಶಾಲಾ ಅಧಿಕಾರಿಗಳು ಉತ್ಸುಕರಾಗಿದ್ದರೆಂದು ತಿಳಿಯಲು ಹರ್ಷವಾಗುತ್ತದೆ. ಪ್ರತಿ ವರ್ಷದಂತೆ, ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ ಕೂಡ ಅವರು ನಮ್ಮ ಕಾರ್ಯಕರ್ತರನ್ನು ಹೆಚ್ಚು ಪ್ರೀತಿ ಮತ್ತು ಗೌರವದಿಂದ ಸ್ವಾಗತಿಸುತ್ತಿದ್ದಾರೆ.

ಇದು ದೇವರ ಕೆಲಸ; ಅವನು ಮೇಲ್ವಿಚಾರಣೆ ನೋಡಿಕೊಳ್ಳುತ್ತಾನೆ. ಅವನು ನಮಗೆ ದಾರಿ ತೋರುತ್ತಾನೆ ಹಾಗೂ ಈ ಕೆಲಸವನ್ನು ಮುಂದುವರೆಸಲು ಪ್ರತಿ ಕ್ಷಣ ನಮ್ಮನ್ನು ಹುರಿದುಂಬಿಸುತ್ತಾನೆ. ಕಾರ್ಯಕರ್ತರಾದ ನಾವು, ಕೆಲಸಕ್ಕಾಗಿ ಸದಾ ಸಿದ್ಧರಿದ್ದೇವೆ. ಈ ಸಂಚಲನವನ್ನು ಪ್ರಪಂಚದಾದ್ಯಂತ ಹರಡಲು ನಾವೆಲ್ಲರೂ ಹೃತ್ಪೂರ್ವಕವಾಗಿ ಹಾಗೂ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇವೆ.

ಮುಂದಿನ ಸುಂದರವಾದ ಭವಿಷ್ಯಕ್ಕಾಗಿ ನಾವೆಲ್ಲರೂ ಜೊತೆಯಾಗಿ ಕೆಲಸ ಮಾಡೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.
ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com
website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.



ಪುಣೆಯಲ್ಲಿನ ಆರ್ ಎಸ್ ಎಸ್ (RSS) ನ ಸದಸ್ಯರು ಏಪ್ರಿಲ್ 16, 2017ರಂದು ಲೈಟ್ ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ವೈರಾಗ್ಯ ಎಂದರೆ ಸಂಬಂಧಗಳನ್ನು ಕಡಿದುಕೊಳ್ಳುವುದಾಗಲಿ ಅಥವಾ ಸೌಕರ್ಯಗಳನ್ನು ತ್ಯಜಿಸುವುದಾಗಲಿ ಅಲ್ಲ. ಅದು, ಸ್ವಾಮ್ಯಾಸಕ್ತಿ (possessive) ಇಲ್ಲದಿರುವುದು, ಜೀವನದ ಸಾಧಾರಣ ಸಂಗತಿಗಳ ಬಗ್ಗೆ ಚಿಂತೆ ಮಾಡದಿರುವುದು. ಅದು, ನಮ್ಮ ಆಸಕ್ತಿಗಳನ್ನು ಉನ್ನತ ಮೌಲ್ಯಗಳನ್ನೊಳಗೊಂಡ ವಿಷಯಗಳ ಕಡೆಗೆ ಬದಲಾಯಿಸಿಕೊಳ್ಳುವುದು.
- ವೈರಾಗ್ಯವಿದ್ದಲ್ಲಿ ನಾವು ನಮ್ಮ ಪ್ರೀತಿ ಹಾಗೂ ಗಮನವನ್ನು ಇಡೀ ವಿಶ್ವಕ್ಕೆ ವಿಸ್ತರಿಸುತ್ತೇವೆ.
- ಒಬ್ಬ ವ್ಯಕ್ತಿಯ ಸಾಧನೆ ಎಂದಿಗೂ ಅವನೊಬ್ಬನದೇ ಆಗಿರುವುದಿಲ್ಲ, ಅದು ಇಡೀ ಮಾನವ ಜನಾಂಗದ ಸಾಧನೆಯಾಗಿರುತ್ತದೆ.
- ಈ ಸೃಷ್ಟಿಯಲ್ಲಿ ನಮ್ಮ ಪಾತ್ರ ಅಸಾಧಾರಣವಾದುದು. ನಾವು ಈ ಭೂಮಿಯ ಮೇಲಿನ ಎಲ್ಲಾ ಜೀವರಾಶಿಗಳ ಪೋಷಕರಾಗಿದ್ದೇವೆ. ನಾವು ಅವುಗಳನ್ನು ರಕ್ಷಿಸಿ, ಉಳಿಸಿಬೇಕು ಹಾಗೂ ವಿಕಸನಕ್ಕೆ ಸಹಾಯ ಮಾಡಬೇಕು.
- ಭಯ ಮತ್ತು ಅಭದ್ರತೆಯಿಂದ ಹಿಂಸಾಚಾರವುಂಟಾಗುತ್ತದೆ. ಜೀವನದ ಸವಾಲುಗಳನ್ನು ಎದುರಿಸಲು ನಾವು ಆಂತರಿಕ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕು.
- ನಾವು ದೇವರಲ್ಲಿ ಭದ್ರವಾಗಿ ನೆಲೆಸಿದಾಗ ಭಯವೆನ್ನುವುದೇ ಇರುವುದಿಲ್ಲ.
- ನಮ್ಮ ಸಾಧನೆಯ ಬಗ್ಗೆ ಅಹಂಭಾವ ಪಡದಿರೋಣ ಹಾಗೂ ನಮ್ಮ ವೈಫಲ್ಯಗಳ ಬಗ್ಗೆ ಎದೆಗುಂದದಿರೋಣ. ನಿಧಾನಿಸಿ, ಆತ್ಮವಿಮರ್ಶೆ ಮಾಡಿಕೊಂಡು, ನಮ್ಮ ಗುರಿಗೆ ಶ್ರುತಿಗೊಳ್ಳುವಂತೆ ನಮ್ಮ ಜೀವನವನ್ನು ಪುನಸ್ಸಂಘಟಿಸಿಕೊಳ್ಳಬೇಕು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5133 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 27.78 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಬಹು ಮುಖ್ಯವಾದ ಅಭ್ಯಾಸ

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಗುರೂಜಿ ಕೃಷ್ಣಾನಂದರವರಿಂದ ಪ್ರಾರಂಭವಾದ ಲೈಟ್ ಚಾನಲ್‌ಗಳ ವಿಶ್ವ ಸಂಚಲನಕ್ಕೆ ಮೇ 18ರಂದು 9 ವರ್ಷಗಳು ತುಂಬಿತು. ಈ 9 ವರ್ಷಗಳಲ್ಲಿ, ಸದ್ದಿಲ್ಲದೆ ಈ ಸಂಚಲನವು ಗಣನೀಯ ಪ್ರಮಾಣದಲ್ಲಿ ಬೆಳೆದಿದೆ. ಈ ಸಂಚಲನದ ಬಗ್ಗೆ ಸಮೂಹ ಮಾಧ್ಯಮಗಳಲ್ಲಿ ಬಹಳ ಅಪರೂಪವಾಗಿ ಪ್ರಸ್ತಾಪಿಸಲಾಗಿದೆ, ಆದರೆ ಈ ಪ್ರಪಂಚದಲ್ಲಿ ಲಕ್ಷಾಂತರ ಜನರಿಗೆ ಇದರ ಬಗ್ಗೆ ಅರಿವಿದೆ ಹಾಗೂ ಇದರಲ್ಲಿ ಸದ್ದಿಲ್ಲದೆ ಭಾಗವಹಿಸುತ್ತಿದ್ದಾರೆ. ಅವರಿಂದ ಹರಡಿದ ಬೆಳಕು ಸದ್ದಿಲ್ಲದೆ ಕೆಲಸ ಮಾಡುತ್ತದೆ ಹಾಗೂ ಮಾನವ ಸಮಷ್ಟಿಯ ಅರಿವನ್ನು ಪರಿವರ್ತನೆಗೊಳಿಸುವಲ್ಲಿ ಸಹಾಯ ಮಾಡುತ್ತದೆ. ಅಂಧಕಾರದ ಮುಷ್ಟಿಯಿಂದ ಹೊರಬಂದು ಬೆಳಕನ್ನು ಆಲಿಂಗಿಸುವುದಕ್ಕೆ ಮಾನವಕುಲಕ್ಕೆ ಸಹಾಯ ಮಾಡುವಂತಹ ಅರಿವಿನ ಪರಿವರ್ತನೆ ಇದಾಗಿದೆ. ಈ ಪರಿವರ್ತನೆ ನಿಧಾನವಾಗಿ ನಮ್ಮನ್ನು ಹೊಸ ಯುಗದೆಡೆಗೆ ಕೊಂಡೊಯ್ಯುತ್ತದೆ.

ಅವರು ಪ್ರಾರಂಭಿಸಿದ ಈ ಸದ್ದಿಲ್ಲದ ಸಂಚಲನದಂತೆ, ಗುರೂಜಿ ಕೃಷ್ಣಾನಂದರವರೂ ಕೂಡ ಅವರ ಜೀವನ ಪೂರ್ತಿ, ಪ್ರಚಾರದಿಂದ ದೂರವುಳಿದು ಸದ್ದಿಲ್ಲದೆ ಕೆಲಸ ಮಾಡಿದರು. ಅವರು ಬೆಳಕು ಹಾಗೂ ಬೆಳಕಿನ ಮಾಸ್ಟರ್‌ಗಳನ್ನು ನಮಗೆ ಪರಿಚಯಿಸಿದರು. ಮಾನವ ಜೀವನದ ಮೂಲಕ ಬೆಳಕು ಅಭಿವ್ಯಕ್ತಿಗೊಳ್ಳುವುದಕ್ಕೆ ಅವರ ಜೀವನವು ಬಹು ಮುಖ್ಯವಾದ ನಿದರ್ಶನವಾಗಿದೆ. ಈ ಪ್ರಪಂಚದ ಬಗ್ಗೆ ಅತಿಯಾದ ಪ್ರೀತಿ ಮತ್ತು ಕಾಳಜಿಯನ್ನು ಹೊಂದಿರುವ ಹೊಸಯುಗದ ವ್ಯಕ್ತಿಗಳಲ್ಲಿ ಅವರು ಮೇಲ್ಪಂಕ್ತಿಯಲ್ಲಿದ್ದಾರೆ. ಬಹಳಷ್ಟು ಮುಂದುವರಿದ ಕಾಲದಲ್ಲಿ ಅವರು ಜೀವಿಸಿದ್ದರೂ ಕೂಡ, ವರ್ತಮಾನದ ಜೀವನವನ್ನು ಅವರು ಗೌರವಿಸಿದರು. ಮಾನವರ ಇತಿಮಿತಿಗಳನ್ನು, ಅಪೂರ್ಣತೆಗಳನ್ನು ಹಾಗೂ ಪರಿಪೂರ್ಣತೆ ಎಡೆಗೆ ಸಾಗಲು ನಡೆಸುವ ಹೋರಾಟವನ್ನು ಅವರು ಗೌರವಿಸಿದರು. ಅವರು, ಎಲ್ಲರಿಗಿಂತ ಮುಂದೆ ಸಾಗುವ, ದಾರಿ ತೋರಿಸುವ ಮಾರ್ಗದರ್ಶಿಯಂತಿದ್ದರು ಹಾಗೂ ಇತರರು ತಮ್ಮನ್ನು ಸೇರಿ ಹಿಂಬಾಲಿಸುವುದಕ್ಕಾಗಿ ಸಹನೆಯಿಂದ ಕಾಯುತ್ತಿದ್ದರು.

ಈ ಪ್ರಕ್ಷುಬ್ಧ ಹಾಗೂ ದಿಕ್ಕು ತೋಚದ ಕಾಲಗಳಲ್ಲಿ ಅವರು ಮಾರ್ಗ ತೋರಿದರು. ಬೆಳಕನ್ನು ಆಯ್ಕೆಮಾಡಿಕೊಳ್ಳುವ ಮಹತ್ವವನ್ನು ಅವರು ನಮಗೆ ತಿಳಿಸಿದರು. ಇಂದಿನ ಸಂಕಷ್ಟದ ಪರಿಸ್ಥಿತಿಯನ್ನು ನಿಭಾಯಿಸಲು ಆಧ್ಯಾತ್ಮಿಕತೆಯೊಂದೇ ದಾರಿ. ಆಧ್ಯಾತ್ಮಿಕರಾಗಲು, ತೀರ್ಥಯಾತ್ರೆ ಮಾಡಬೇಕಾಗಿಲ್ಲ; ಎಲ್ಲಿಯೂ ಹೋಗಬೇಕಾಗಿಲ್ಲ; ನಾವು, ಒಳ್ಳೆಯ, ಪ್ರಾಮಾಣಿಕ ಹಾಗೂ ಶಾಂತಿಯುತ ವ್ಯಕ್ತಿಗಳಾಗಬೇಕಷ್ಟೇ. ಒಳ್ಳೆಯತನ ಮತ್ತು ಪ್ರಾಮಾಣಿಕತೆಯಿಂದ ನಾವು ಜೀವನ ನಡೆಸಿದಾಗ, ಈ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿರಾತಂಕವಾಗಿ ದಾಟಲು ಬೆಳಕಿನಿಂದ ನಮಗೆ ಸಹಾಯ ಸಿಗುತ್ತದೆ. ಅವರು ಈ ಲೈಟ್ ಚಾನಲಿಂಗ್ ತಂತ್ರವನ್ನು ನಮಗೆ ನೀಡಿದರು. ಶಾಂತಿಯನ್ನು ಅನುಭವಿಸಲು ಹಾಗೂ ಸಮಾಧಾನದಿಂದಿರಲು ಜನರಿಗೆ ಇದು ಸಹಾಯ ಮಾಡುತ್ತದೆ.

ಹೊಸಯುಗವು ಈಗಲೇ ಸ್ಥಾಪನೆಯಾಗಬೇಕೆಂದು ಅವರು ಬಯಸಿದರು; ಆದರೆ ಸಂಕ್ರಮಣದ ಪ್ರಕ್ರಿಯೆಯು ಸಮಯ ತೆಗೆದುಕೊಳ್ಳುತ್ತದೆ ಎನ್ನುವುದೂ ಕೂಡ ಅವರಿಗೆ ತಿಳಿದಿತ್ತು. ಬದಲಾಗಲು ಜನರು ಸಮಯ ತೆಗೆದು ಕೊಳ್ಳುತ್ತಾರೆ. ಮೊದಲು ಅವರು ಉನ್ನತವಾದ ಜೀವನ ವಿಧಾನದ ಬಗ್ಗೆ ತಿಳಿದುಕೊಳ್ಳಬೇಕು, ತದನಂತರ ವಾಸ್ತವವಾಗಿ ಆ ಉನ್ನತವಾದ ರೀತಿಯಲ್ಲಿ ಬದುಕುವುದನ್ನು ಪ್ರಾರಂಭಿಸಬೇಕು. ಈ ಪ್ರಕ್ರಿಯೆ ಸಮಯ ತೆಗೆದುಕೊಳ್ಳುತ್ತದೆ. ಲೈಟ್ ಚಾನಲಿಂಗ್ ಈ ಪ್ರಕ್ರಿಯೆಯನ್ನು ಚುರುಕುಗೊಳಿಸುತ್ತದೆ.

ಆದ ಕಾರಣ ಲೈಟ್ ಚಾನಲಿಂಗ್ ಬಗೆಗಿನ ಅರಿವನ್ನು ಪ್ರಪಂಚವಿಡೀ ಹರಡುವುದು ಬಹಳ ಮುಖ್ಯ. ಇದು ಈ ಕಷ್ಟ, ಪ್ರಕ್ಷುಬ್ಧ ಹಾಗೂ ಗೊಂದಲದ ಸಮಯದಲ್ಲಿನ ಅತಿ ಮುಖ್ಯವಾದ ಅಭ್ಯಾಸವಾಗಿದೆ.

■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳಿ

### ಸೋಲಾಪೂರ್

**ಪ್ರತಿದಿನ (ಸಂಜೆ** 7 - 7.30)
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಳ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

**ಭಾನುವಾರ (ಬೆಳಿಗ್ಗೆ** 10 - 10.30)
ನಂ. 481, ಸಾಯಿಪ್ರೇಮ್, 19ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ** 4 - 4.30)
3B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ
☎ 9011038169 ಶ್ರೀ ಆಶುತೋಶ್ ನವನ್‌ಗುಲ್



### ಮೀರಜ್

**ಗುರುವಾರ (ಸಂಜೆ** 7.45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.






## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ಪ್ರತಿ ಶನಿವಾರ ಶಾಲೆಯಲ್ಲಿ ನಾವು ಲೈಟ್ ಚಾನಲ್ ಮಾಡುತ್ತೇವೆ. ಈಗ ನಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಬಹಳ ಸಮಾಧಾನಿಗಳಾಗಿದ್ದಾರೆ.

–ಶ್ರೀಮತಿ ಠಕ್ಕರ್, ಪ್ರಿನ್ಸಿಪಾಲ್, ವಿದ್ಯಾನಿಕೇತನ್ ಇಂಗ್ಲೀಷ್ ಸ್ಕೂಲ್, ಸಾಂಗ್ಲಿ

ಒಂದರಿಂದ ನಾಲ್ಕನೆಯ ತರಗತಿಯ ವಿದ್ಯಾರ್ಥಿಗಳಿಗೆ ಲೈಟ್ ಚಾನಲ್ ಮಾಡುವುದನ್ನು ಹೇಳಿಕೊಟ್ಟಿದ್ದೇವೆ ಹಾಗೂ ಅವರ ಪೋಷಕರಿಗೂ ಇದರ ಬಗ್ಗೆ ತಿಳಿಸಿದ್ದೇವೆ. ಈಗ ವಿದ್ಯಾರ್ಥಿಗಳು ನಿಯತವಾಗಿ ಲೈಟ್ ಚಾನಲಿಂಗ್ ಮಾಡುತ್ತಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳು ಹೆಚ್ಚು ಶಿಸ್ತು ಬದ್ಧರಾಗಿರುವುದು ಶಾಲೆಗೆ ಪ್ರಯೋಜನವಾಗಿದೆ.

–ಶ್ರೀಮತಿ ಕಾಲೆ, ಪ್ರಿನ್ಸಿಪಾಲ್, ಶ್ರೀ ಸ್ವಾಮಿ ವಿವೇಕಾನಂದ ಪ್ರೈಮರಿ ಸ್ಕೂಲ್, ಪುಣೆ

ನಾನು ನಿಯತವಾಗಿ ಲೈಟ್ ಚಾನಲಿಂಗ್ ಮಾಡುತ್ತಿರುವುದರಿಂದ ನನಗೆ ಬಹಳಷ್ಟು ಪ್ರಯೋಜನವಾಗಿದೆ. ನನಗೆ ಹಲ್ಲು ನೋವಿನ ಸಮಸ್ಯೆಯಿತ್ತು. ದಂತ ವೈದ್ಯರೆಂದರೆ ನನಗೆ ಬಹಳ ಭಯವಿತ್ತು. ನಾನು ಇಷ್ಟಪಡುವಂತಹ ಒಳ್ಳೆಯ ದಂತ ವೈದ್ಯರಲ್ಲಿಗೆ ನನ್ನನ್ನು ಕರೆದುಕೊಂಡು ಹೋಗುವಂತೆ ನಾನು ಬೆಳಕಿಗೆ ಪ್ರಾರ್ಥಿಸಿದೆ. ಅದೇ ದಿನ ಒಬ್ಬ ವೈದ್ಯರ ಬಗ್ಗೆ ಮಾಹಿತಿ ತಿಳಿಯಿತು, ಕರೆ ಮಾಡಿದಾಗ ಅವರಿಂದ ಉತ್ತರ ಬರಲಿಲ್ಲ. ಇದರಿಂದ ನಾನು ವೈದ್ಯರಲ್ಲಿಗೆ ಹೋಗಬೇಕಾಗಿಲ್ಲವೆಂದು ನನಗೆ ಸಮಾಧಾನವಾಯಿತು. ಆಶ್ಚರ್ಯವೆಂಬಂತೆ ಆ ದಂತ ವೈದ್ಯರೇ ಕರೆ ಮಾಡಿದರು. ಅವರು ನನಗೆ ಸಮಾಧಾನ ತಂದರು. ಚಿಕಿತ್ಸೆಯ ಸಮಯದಲ್ಲಿ, ಒಬ್ಬರಿಗೊಬ್ಬರಿಗೆ ತಿಳಿಯದಂತೆ ನಾವಿಬ್ಬರೂ ಪ್ರಾರ್ಥಿಸಿದೆವು. ಬೆಳಕೇ ನನ್ನನ್ನು ಈ ದಂತ ವೈದ್ಯರಲ್ಲಿಗೆ ಕರೆದುಕೊಂಡು ಬಂದಿದೆ ಎಂದು ನಾನು ನಂಬಿದ್ದೇನೆ.

ಕ್ರಿಸ್ ಮಸ್ ಹಬ್ಬದ ಸಮಯದಲ್ಲಿ ನಾವು ಕಮರ್ಷಿಯಲ್ ಸ್ಟ್ರೀಟ್‌ಗೆ ಹೋಗಿದ್ದೆವು. ರಸ್ತೆಯ ತುಂಬಾ ಜನರ ಓಡಾಟ ಹೆಚ್ಚಾಗಿತ್ತು, ಪಾರ್ಕಿಂಗ್‌ಗೆ ಇರಲಿ ಓಡಾಡುವುದಕ್ಕೇ ಜಾಗವಿರಲಿಲ್ಲ. ಬೆಳಕನ್ನು ಪ್ರಾರ್ಥಿಸಿದೆ. ನನ್ನ ಜೊತೆಗಿದ್ದವರನ್ನು ಇಳಿಸಿದ ನಂತರ, ಹೆಚ್ಚು ಅಲೆದಾಡದೆ ನನಗೆ ಕಾರನ್ನು ನಿಲ್ಲಿಸಲು ಸ್ಥಳ ಸಿಕ್ಕಿತು. ನಿಜವಾಗಿ ಇದೊಂದು ಪವಾಡವೇ ಸರಿ.

– ಅರ್ಜುನ್ ಸಿಂದಿಯ

ನನ್ನ ತಂಡದಲ್ಲಿರುವ ಕೆಲವು ಮಹಿಳೆಯರು ಪ್ರತಿ ದಿನ ಲೈಟ್ ಚಾನಲ್ ಮಾಡುತ್ತಾರೆ. ಮತ್ತು ಬೆಳಕನ್ನು ತಮ್ಮ ಮಾರ್ಗದರ್ಶಿ ಮತ್ತು ಸಂಗಾತಿಯನ್ನಾಗಿ ಮಾಡಿಕೊಂಡಿದ್ದಾರೆ.

ನನ್ನ ಸ್ನೇಹಿತೆಯಾದ ಶ್ರೀಮತಿ ಜಾಗೃತಿ ಕೋರ್ಡೆಯವರು ರಾತ್ರಿ 11 ಗಂಟೆ ಸಮಯದಲ್ಲಿ ತೀವ್ರವಾದ ಬೆನ್ನು ನೋವಿನಿಂದ ನರಳುತ್ತಿದ್ದರು. ತಮ್ಮ ಕೈಗಳಿಂದ ನೋವು ಇರುವಂಥ ಬೆನ್ನಿನ ಭಾಗಕ್ಕೆ ಮುಲಾಮು ಹಚ್ಚಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲ್ಲಿಲ್ಲ. ಅವರು ಮಲಗಿಕೊಂಡೆ ಬೆಳಕನ್ನು ಪ್ರಾರ್ಥಿಸಿ, ಅದನ್ನು ಚಾನಲ್ ಮಾಡಿದರು. ಐದು ನಿಮಿಷದಲ್ಲಿ ಬೆನ್ನು ನೋವು ಸಂಪೂರ್ಣವಾಗಿ ಮಾಯವಾಗಿ ಸುಖ ನಿದ್ದೆಗೆ ಜಾರಿದರು.

ಒಮ್ಮೆ ಅವರು ತಮ್ಮ ರೋಗಿಯೊಬ್ಬರ ದೇಹದ ನಡು ಭಾಗದಲ್ಲಿ ಅಕ್ಯುಪ್ರಷರ್ ಚಿಕಿತ್ಸೆ ಕೊಡುತ್ತಿದ್ದರು. ವಿಪರೀತ ನೋವಿದ್ದ ಜಾಗದಲ್ಲಿ, ನೀರಿನ ಹನಿಯಂತೆ ಕಾಣುವ ಬೆಳಕಿನ ಬಿಂದುವೊಂದು ತಮ್ಮ ಬೆರಳ ತುದಿಯಿಂದ ಬಿದ್ದು ನಡು ಭಾಗವನ್ನು ಪ್ರವೇಶಿಸುತ್ತಿರುವುದನ್ನು ಸ್ಪಷ್ಟವಾಗಿ ನೋಡಿದರು!

ಬೆಳಕಿನಿಂದ ರಕ್ಷಣೆ ಪಡೆದ ಅನುಭವ ಶ್ರೀಮತಿ ವೈಶಾಲಿ ಮೋತೆಯವರಿಗೆ ಆಗಿದೆ. ಅವರು ಒಂದು ಮುಂಜಾನೆ ಓದಲು ರೀಡಿಂಗ್ ಲ್ಯಾಂಪನ್ನು ಆನ್ ಮಾಡಿದ್ದರು. ಇದ್ದಕ್ಕಿದ್ದ ಹಾಗೆ ಬಲ್ಬ್ ಸ್ಫೋಟಗೊಂಡು ಕೋಣೆಯ ತುಂಬಾ ಒಡೆದ ಗಾಜಿನ ಚೂರುಗಳು ಚದುರಿದವು. ಅವರು ಕುಳಿತುಕೊಂಡಿದ್ದ ಸೋಫಾದ ಕೆಳಗೆ ಕೂಡಾ ಗಾಜಿನ ತುಣುಕುಗಳು ಬಿದ್ದವು. ಆದರೆ ಒಂದೇ ಒಂದು ಚೂರು ಸಹ ಅವರ ಮುಖದ ಮೇಲಾಗಲೀ ಅಥವಾ ಸೋಫಾದ ಮೇಲಾಗಲೀ ಬೀಳಲಿಲ್ಲ. ಬೆಳಕಿಗೆ, ಋಷಿಗಳಿಗೆ ಮತ್ತು ಗುರೂಜಿಯವರಿಗೆ ನಾವು ಕೃತಜ್ಞರಾಗಿದ್ದೇವೆ.

–ಸರೋಜ್ ಸಾವಲೆ

**ಪ್ರೀತಿಯ ಶಿಕ್ಷಕರೇ,**

**ಲೈಟ್ ಚಾನಲಿಂಗ್‌ಗೆ ಬೆಂಬಲ ನೀಡಿದ ನಿಮಗೆ ಧನ್ಯವಾದಗಳು. ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್‌ಅನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇವೆ. ನಮ್ಮ ಕಾರ್ಯಕರ್ತರಿಂದ ನಿಮಗೇನಾದರು ಸಹಾಯ ಬೇಕಿದ್ದರೆ ನಮ್ಮನ್ನು ಸಂಪರ್ಕಿಸಿ. ನಮ್ಮ ಫೋನ್ ನಂ. 9900075280, 080-28465280.**

**–ಲೈಟ್ ಚಾನಲ್ಸ್ ವಿಶ್ವ ಸಂಚಲನ**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ